ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

17ನೇ ಮಾರ್ಚ್. 2011

**ಮಾನ್ಯ ಶ್ರೀ ಯಡಿಯೂರಪ್ಪರವರೇ,**

ಕಳೆದ ತಿಂಗಳು ಮಡಿವಾಳದಲ್ಲಿ ತೆರೆದ ಮಳೆ ನೀರು ಚರಂಡಿಯಲ್ಲಿ ಕೊಚ್ಚಿ ಹೋಗಿ ಮೂರು ವರ್ಷದ ಬಾಲಕ ರಿಹಾನ್ ಪಾಷಾ ದುರಂತ ಸಾವಿಗೀಡಾದ ಘಟನೆಗೆ ಬೆಂಗಳೂರು ಸಾಕ್ಷಿಯಾಗಿದೆ. ತೆರೆದ ಮಳೆನೀರು ಚರಂಡಿಗಳು ಈಗಾಗಲೇ 2010ರಲ್ಲಿ 18 ತಿಂಗಳ ಮಗು ವಿಜಯ್ ಹಾಗೂ 2009ರಲ್ಲಿ ಆರು ವರ್ಷದ ಅಭಿಷೇಕ್‌ನನ್ನು ಆಹುತಿ ಪಡೆದಿವೆ. ಇಂತಹ ದುರದೃಷ್ಟಕರ ಹಾಗೂ ತಡೆಯಬಹುದಾಗಿದ್ದ ಮೃತ್ಯು, ನಗರದಲ್ಲಿ ಅಸಮರ್ಪಕ ಮೂಲ ಸೌಕರ್ಯ ಹಾಗೂ ತೆರೆದ ಚರಂಡಿಗಳಿಂದಾಗಿ ಸಂಭವಿಸುವ ಅವಘಡಗಳನ್ನು ನಿರ್ವಹಿಸಲು ಬಿಬಿಎಂಪಿಯು ಸಿದ್ಧತೆ ಮಾಡಿಕೊಂಡಿಲ್ಲ ಎಂಬುದಕ್ಕೆ ನಿದರ್ಶನವಾಗಿದೆ.

ಇಂತಹ ಅನಾಹುತಗಳನ್ನು ತಡೆಗಟ್ಟುವ ಹೊಣೆಗಾರಿಕೆ ಬಿಬಿಎಂಪಿಯದ್ದು. ಈ ದಿಸೆಯಲ್ಲಿ ಎಲ್ಲಾ ತೆರೆದ ಮಳೆನೀರು ಚರಂಡಿಗಳಿಗೆ ಬೇಲಿ ನಿರ್ಮಿಸುವುದು ಹಾಗೂ ಇತರ ಮೂಲಸೌಕರ್ಯ ಕಲ್ಪಿಸುವುದರೊಂದಿಗೆ ತುರ್ತು ಸಂದರ್ಭಗಳನ್ನು ನಿಭಾಯಿಸುವ ಕುರಿತ ಕ್ರಮಗಳನ್ನು ಬಿಬಿಎಂಪಿಯು ತುರ್ತಾಗಿ ಕೈಗೊಳ್ಳಬೇಕಾಗಿದೆ. ಇನ್ನೆರಡು ತಿಂಗಳಲ್ಲಿ ನಗರಕ್ಕೆ ಮುಂಗಾರು ಪ್ರವೇಶಿಸಲಿದ್ದು, ಈ ಅವಧಿಯಲ್ಲಿ ಸರ್ಕಾರ / ಬಿಬಿಎಂಪಿ ಕ್ರಿಯಾಶೀಲವಾಗಿ ಸೂಕ್ತ ಯೋಜನೆಗಳನ್ನು ರೂಪಿಸುವ ಮೂಲಕ ಜೀವ ಹಾನಿ, ಆಸ್ತಿ ಹಾಗೂ ಮೂಲಸೌಲಭ್ಯಗಳಿಗೆ ಹಾನಿಯಾಗುವುದನ್ನು ತಡೆಗಟ್ಟಲು ಎಲ್ಲಾ ರೀತಿಯಿಂದ ಕಾರ್ಯಪ್ರವೃತ್ತವಾಗಬೇಕು ಹಾಗೂ ಇದಕ್ಕೆ ಸಂಬಂಧಿಸಿದ ಇತರ ಎಲ್ಲಾ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಬೇಕೆಂದು ನಾನು ಒತ್ತಾಯಿಸುತ್ತೇನೆ.

ಈ ನಿಟ್ಟಿನಲ್ಲಿ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ನಾನು ಸರ್ಕಾರವನ್ನು / ಬಿಬಿಎಂಪಿಯನ್ನು ಆಗ್ರಹಿಸುತ್ತೇನೆ.

**ತಮ್ಮ ವಿಶ್ವಾಸಿ,**

**ರಾಜೀವ್ ಚಂದ್ರಶೇಖರ್**

**ಶ್ರೀ ಬಿ ಎಸ್ ಯಡಿಯೂರಪ್ಪರವರೇ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್: 91-80-22863680
ಅಂತರ್ಜಾಲ ವಿಳಾಸ : rajeev.c@nic.in